# ಜಾನಪದ ಗರತಿ ಮತ್ತು ಆಧುನಿಕ ಮಹಿಳೆ

**ಮೋಹನ ಬೆಣಚಮರ್ಡಿ**

ಉಪನ್ಯಾಸಕರು, ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಎಸ್.ವಿ.ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ.

DOI: https://doi.org/10.5281/zenodo.17258194

## ABSTRACT:

ಈ ನೆಲದ ಸತ್ವವನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಜನಪದರ ಕೊಡುಗೆ ಅಪಾರ. ದಿನದ ಪ್ರತಿ ಕಾರ್ಯದಲ್ಲೂ ದೇಶೀಯತೆಯ ಸೊಗಡನ್ನು ಹೇಗೆ ಹರಡಿದ್ದರು ಎಂಬುದನ್ನು ನಮ್ಮ ಜನಪದ ಸಾಹಿತ್ಯ ಹೇಳುತ್ತದೆ. ಬದಲಾಗಿರುವ ಇಂದಿನ ಆಧುನಿಕ, ಆಧುನಿಕೋತ್ತರ ಭಾರತದಲ್ಲಿ ಭಾರತೀಯ ಸ್ತ್ರೀಯರ ಮನೋಭಾವ, ಜೀವನಶೈಲಿಯಲ್ಲಿ ಮೇಲ್ನೋಟಕ್ಕೆ ಸಾಕಷ್ಟು ಬದಲಾವಣೆಯಾಗಿದೆ ಎಂಬಂತೆ ಕಂಡರೂ ಜಾನಪದ ಗರತಿ ಮತ್ತು ಆಧುನಿಕ ಮಹಿಳೆಯ ಸಾಮ್ಯತೆಗಳಿರುವುದನ್ನು ಕಾಣುತ್ತೇವೆ. ಮನೆಯ ನಾಲ್ಕು ಗೋಡೆಗೆ ಸೀಮಿತಳಾಗಿದ್ದ ಮಹಿಳೆಯ ಮನರಂಜನೆಯ ಒಂದು ಅಂಶವಾಗಿದ್ದ ಜನಪದ ಕ್ರೀಡೆಗಳಲ್ಲೂ ಮಹಿಳೆಯರನ್ನು ಕೇವಲ ಒಳಾಂಗಣ ಆಟಕ್ಕೆ ಮಾತ್ರ ಮೀಸಲಿರಿಸಿದರು. ಹೆಣ್ಣುಮಕ್ಕಳ ಆಟಗಳನ್ನು ಆಟಗಳೆಂದು ಕರೆಯುತ್ತಿದ್ದರೆ ಹೊರತು ಕ್ರೀಡೆಗಳೆಂದಲ್ಲ. ಇಂದಿನ ಮಹಿಳೆ ಕುಟುಂಬದ ಆರ್ಥಿಕ ಪ್ರಗತಿ, ಮಕ್ಕಳ ಶ್ರೇಯೋಭಿವೃದ್ಧಿ, ತನ್ನ ಅಸ್ಮಿತೆ, ಸ್ವಾವಲಂಬಿ ಬದುಕಿಗೋಸ್ಕರ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದಿರುವ ಮಹಿಳೆ ಪುರುಷನಿಗೆ ಸರಿಸಮಾನವಾಗಿ ದುಡಿಯುತ್ತಿರುವುದರಿಂದ ಮಕ್ಕಳ ಆರೈಕೆಗೋಸ್ಕರ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದಾಳೆ.

## KEYWORDS:

ಜನಪದ, ಆಧುನಿಕ ಮಹಿಳೆ, ಜನಪದ ಕಾವ್ಯ, ದೇಶೀಯತೆಯ ಸೊಗಡು

ವೈವಿಧ್ಯಮಯ ಆಚಾರ-ವಿಚಾರ, ಸಂಪ್ರದಾಯ, ಸಂಸ್ಕೃತಿಯ ಮೂಲಕ ಜಗತ್ತಿನಲ್ಲಿಯೇ ಶ್ರೇಷ್ಠ ಪರಂಪರೆಯನ್ನು ಹೊಂದಿರುವ ದೇಶ ನಮ್ಮದು. ಇಲ್ಲಿಯ ಜನಪದ ಸಂಸ್ಕೃತಿ ವಿಭಿನ್ನ ಮತ್ತು ವಿಶಿಷ್ಟತೆಯಿಂದ ಕೂಡಿದೆ. ಅದರಲ್ಲೂ ಕನ್ನಡ ನಾಡಿನ ಜನರ ಕುರಿತಾಗಿ ಹೇಳುವಾಗ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂದು ಜನಪದರ ಕಾವ್ಯಶಕ್ತಿ, ಬುದ್ಧಿಮತ್ತೆಯ ಬಗ್ಗೆ ಕವಿರಾಜಮಾರ್ಗಕಾರ ಅದ್ಭುತವಾಗಿ ಹೇಳಿದ್ದಾನೆ. ಈ ನೆಲದ ಸತ್ವವನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಜನಪದರ ಕೊಡುಗೆ ಅಪಾರ. ದಿನದ ಪ್ರತಿ ಕಾರ್ಯದಲ್ಲೂ ದೇಶೀಯತೆಯ ಸೊಗಡನ್ನು ಹೇಗೆ ಹರಡಿದ್ದರು ಎಂಬುದನ್ನು ನಮ್ಮ

ಜನಪದ ಸಾಹಿತ್ಯ ಹೇಳುತ್ತದೆ. ಅದರಲ್ಲೂ ಜನಪದ ಗರತಿಯರಂತು ಬೆಳಿಗ್ಗೆ ಎದ್ದಾಗಿನಿಂದ "ಬೆಳಗಾರೆ ಎದ್ದು ನಾನ್ಯಾರ ನೆನೆಯಲಿ/ ಎಳ್ಳು ಜೀರಿಗೆ ಬೆಳೆಯೊಳ/ ಭೂತಾಯ ಎದ್ದೊಂದು ಗಳಿಗೆ ನೆನದೇನ" ಎಂದು ದೈನಂದಿನ ಜೀವನಕ್ಕೆ ತೀರ ಅವಶ್ಯಕವಾಗಿರುವ ಎಳ್ಳು ಜೀರಿಗೆಯನ್ನು ಬೆಳೆಯುವ ಗರತಿಗೆ ಪೂಜೆಯ ಕೋಣೆಯಲ್ಲಿ ಕುಳಿತು ವಿವಿಧ ದೇವರನ್ನು ಪೂಜಿಸಲು ಆಕೆಗೆ ಸಮಯವಿಲ್ಲ. ಅದಕ್ಕಾಗಿ ಆಕೆ ತನ್ನ ದಿನನಿತ್ಯದ ಅವಶ್ಯಕತೆಯನ್ನು ಈಡೇರಿಸುತ್ತಿರುವ ಭೂತಾಯಿಯನ್ನೇ ದೇವರೆಂದು ಆರಾಧಿಸುವುದನ್ನು ಕಾಣುತ್ತೇವೆ. ಆದರೆ ಬದಲಾಗುತ್ತಿರುವ, ಬದಲಾಗಿರುವ ಇಂದಿನ ಆಧುನಿಕ, ಆಧುನಿಕೋತ್ತರ ಭಾರತದಲ್ಲಿ ಭಾರತೀಯ ಸ್ತ್ರೀಯರ ಮನೋಭಾವ, ಜೀವನಶೈಲಿಯಲ್ಲಿ ಮೇಲ್ನೋಟಕ್ಕೆ ಸಾಕಷ್ಟು ಬದಲಾವಣೆಯಾಗಿದೆ ಎಂಬಂತೆ ಕಂಡರೂ ಜಾನಪದ ಗರತಿ ಮತ್ತು ಆಧುನಿಕ ಮಹಿಳೆಯ ಸಾಮ್ಯತೆಗಳಿರುವುದನ್ನು ಕಾಣುತ್ತೇವೆ.

ಇಂದಿನ ಆಧುನಿಕ, ವಿದ್ಯಾವಂತ, ಉದ್ಯೋಗಸ್ಥ ಮಹಿಳೆ ಆರ್ಥಿಕವಾಗಿ ಸಬಲಳಾಗಿದ್ದು ತನ್ನ ವೃತ್ತಿಜೀವನದ ಜೊತೆಗೆ ಕೌಟುಂಬಿಕ ಬದುಕನ್ನು ಸುಂದರವಾಗಿ ಕಟ್ಟಿಕೊಂಡಿದ್ದಾಳೆ. ಮೂಲತಃ ಕೃಷಿ ಮತ್ತು ಬೇಟೆಯಾಡುವುದರಲ್ಲಿ ಭಾಗವಹಿಸುತ್ತಿದ್ದ ಮಹಿಳೆ ಬಾಣಂತನ, ಶಿಶುಪಾಲನೆ, ಇತ್ಯಾದಿ ಕೌಟುಂಬಿಕ ಜವಾಬ್ದಾರಿಗಳಲ್ಲಿ ಸಿಲುಕಿಕೊಂಡು ಸಮಾಜದ ಮುಖ್ಯವಾಹಿನಿಯಿಂದ ದೂರ ಸರಿದ ಆಕೆ ನಿಧಾನವಾಗಿ ಪುರುಷನ ಮೇಲೆ ಅವಲಂಬಿತಳಾಗುತ್ತಾಳೆ. "ಹೆಣ್ಣಿನ ಹೊರ ಪ್ರಪಂಚ ಸಂಕುಚಿತವಾಗತೊಡಗಿರಬೇಕು. ಕುಟುಂಬದ ಅಗತ್ಯಗಳಿಗಾಗಿ ಹೊರಗಿನ ಬೇಟೆ ಕೃಷಿ ಕೆಲಸಗಳಲ್ಲಿ ಗಂಡು ಕ್ರಿಯಾಶೀಲನಾದಾಗ ಮಕ್ಕಳ ಪಾಲನೆ, ಆಹಾರ ಸಂಗ್ರಹ ಸಿದ್ಧತೆಗಳು ಹೆಣ್ಣಿನ ಕಾರ್ಯಕ್ಷೇತ್ರವಾದವು. ಕುಟುಂಬದಲ್ಲಿ ಹೆಣ್ಣು ಗಂಡಿನ ಶ್ರಮವಿಭಜನೆಯ ವ್ಯವಸ್ಥೆಯಲ್ಲಿ ಮೊದಲಿದ್ದ ಸಡಿಲಿಕೆ ಕಡಿಮೆಯಾಗುತ್ತಾ ಉತ್ಪಾದಕ ಕೆಲಸ ಗಂಡಿನದಾಗಿ, ಮನೆಯೊಳಗಿನ ಸದಸ್ಯರ ಪೋಷಣೆಯ, ಆರ್ಥಿಕ ಮಾಪನದಲ್ಲಿ ಅನುತ್ಪಾದಿತವಾದ ಕ್ಷೇತ್ರ ಹೆಣ್ಣಿನದಾಯಿತು"[1] ತನ್ನಲ್ಲಿಲ್ಲದ, ಹೆಣ್ಣಿನಲ್ಲಿ ಮಾತ್ರ ಇರುವ ಅವಳ ತಾಯ್ತನ ಮತ್ತು ಮನೋ ಶಕ್ತಿಯನ್ನು ಕಂಡು ಆಶ್ಚರ್ಯಪಟ್ಟ ಪುರುಷ ಆಕೆಯನ್ನು ದೇವತೆಯನ್ನಾಗಿ ಕಾಣುತ್ತಾನೆ. ಗ್ರಾಮದೇವತೆಯ ರೂಪದಲ್ಲಿ ಆಕೆಯನ್ನು ಆರಾಧಿಸುತ್ತಾ ಬಂದಿದ್ದಾನೆ. ಈ ರೀತಿಯಾಗಿ ಅತ್ಯುನ್ನತ ಸ್ಥಾನದಲ್ಲಿದ್ದ ಮಹಿಳೆ ನಿಧಾನವಾಗಿ ಅನುತ್ಪಾದಕ ಸ್ಥಾನಕ್ಕೆ ಆಕೆಯನ್ನು ನಿಲ್ಲಿಸಿ ಪರಾವಲಂಬಿಯಾದ ಮಹಿಳೆ ಮನುವಿನ ಕಾಲಕ್ಕೆ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ತಲೆಬರಹವನ್ನು ಹೊತ್ತು ನಾಲ್ಕು ಗೋಡೆಗೆ ಸೀಮಿತಳಾದಳು. ಈ ಎಲ್ಲ ಬದುಕಿನ ನಡುವೆಯೇ ಜನಪದ ಗರತಿ ಸಂತಸವನ್ನು ಕಂಡುಕೊಂಡು ತನ್ನ ಸುಖ–ದುಃಖ, ನೋವು ನಲಿವುಗಳನ್ನು ಹಾಡು, ನೃತ್ಯಗಳ ಮೂಲಕ ಹೊರಹಾಕಿದ್ದಾಳೆ. ಆ ಮೂಲಕ ಇತಿಹಾಸದಲ್ಲಿ ಮಹಿಳೆಯರ

ಸ್ಥಾನದಲ್ಲಾದ ಅನೇಕ ಏರಿಳಿತಗಳನ್ನು ನಾವು ಗಮನಿಸಬಹುದು. ಜನಪದ ಮಹಿಳೆ ಆಧುನಿಕವಾಗುತ್ತಾ ಸಾಗಿದಾಗ ಆಕೆ ಪಡೆದುಕೊಂಡದ್ದು ಮತ್ತು ಕಳೆದುಕೊಂಡದ್ದು ಸಾಕಷ್ಟಿದೆ.

ಮನೆಯ ನಾಲ್ಕು ಗೋಡೆಗೆ ಸೀಮಿತಳಾಗಿದ್ದ ಮಹಿಳೆಯ ಮನರಂಜನೆಯ ಒಂದು ಅಂಶವಾಗಿದ್ದ ಜನಪದ ಕ್ರೀಡೆಗಳಲ್ಲೂ ಮಹಿಳೆಯರನ್ನು ಕೇವಲ ಒಳಾಂಗಣ ಆಟಕ್ಕೆ ಮಾತ್ರ ಮೀಸಲಿರಿಸಿದರು. ಹೆಣ್ಣುಮಕ್ಕಳ ಆಟಗಳನ್ನು ಆಟಗಳೆಂದು ಕರೆಯುತ್ತಿದ್ದರೆ ಹೊರತು ಕ್ರೀಡೆಗಳೆಂದಲ್ಲ. ಹೆಣ್ಣು ಮಕ್ಕಳ ಆಟಗಳು ಮನೆಯ ಸುತ್ತಮುತ್ತ ಗಿರಕಿ ಹೊಡೆದರೆ ಗಂಡು ಮಕ್ಕಳ ಆಟಗಳು ಶಕ್ತಿಪ್ರದರ್ಶನಕ್ಕೆ ಸೇರಿದ್ದವು. ಹೆಣ್ಣು ಮಕ್ಕಳ ಆಟಗಳನ್ನು ಗಂಡು ಮಕ್ಕಳು ಆಡುವುದಾಗಲಿ ಗಂಡು ಮಕ್ಕಳ ಆಟಗಳನ್ನು ಹೆಣ್ಣು ಮಕ್ಕಳು ಆಡುವುದಾಗಲಿ ಸಾಧ್ಯವಿರಲಿಲ್ಲ. ಆದರೆ ಆಧುನಿಕ ಸಮಾಜದಲ್ಲಿ ಇಂತಹ ನೇಪಥ್ಯಗಳೆಲ್ಲ ದೂರ ಸರಿದು ಇಂದಿನ ಮಹಿಳೆಯರು ಕೇವಲ ಗಂಡಸರಿಗೆ ಮಾತ್ರ ಸೀಮಿತವೆಂದುಕೊಂಡ ಕಬಡ್ಡಿ, ಖೋಖೋ, ಕುಸ್ತಿ, ಕ್ರಿಕೆಟ್ ಇತ್ಯಾದಿ ಆಟಗಳನ್ನು ಆಡುತ್ತಿರುವುದನ್ನು ಗಮನಿಸಿದಾಗ ಆಧುನಿಕ ಮಹಿಳೆಯರ ಕ್ರೀಡಾ ಪ್ರಪಂಚ ಬದಲಾಗಿರುವುದನ್ನು ಮತ್ತು ಈ ಪ್ರಪಂಚವನ್ನು ಎಲ್ಲರೂ ಒಪ್ಪಿಕೊಂಡಿರುವುದನ್ನು ಗಮನಿಸಬಹುದು.

“ಗಂಡಿನ ಅಧಿಕಾರ ಪ್ರವೃತ್ತಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ನಿರಂತರ ಹೋರಾಡುತ್ತಲೇ ಬಂದಿದೆ. ಅದಕ್ಕಾಗಿ ಮೌಲ್ಯದ ಹೆಸರಿನಲ್ಲಿ ಹೆಣ್ಣಿಗೆ ಕೆಲವೊಂದು ಗುಣ, ಪಾತ್ರಗಳನ್ನು ನಿರ್ದೇಶಿಸಿ ಅವನ್ನು ಸಹಜ ಎಂದು ಭ್ರಮಾತ್ಮಕಗೊಳಿಸಲಾಗಿದೆ. ಗಾದೆಗಳು ಇಂತಹ ಸಾಮಾಜಿಕ ನೀತಿ-ನಿಯಮಗಳನ್ನು ಜಾರಿಗೊಳಿಸುವಲ್ಲಿ ಮತ್ತು ಪುರುಷಾಧಿಕಾರದ ಸಾತತ್ಯಕ್ಕಾಗಿ ದುಡಿಯುತ್ತಿರುತ್ತವೆ. ಹೀಗಾಗಿ ಇವು ಪ್ರಕಟಿಸುವ ನಿಲುವು ಇಂತಹ ಮೌಲ್ಯಗಳನ್ನು ಸ್ಥಿರೀಕರಿಸುವುದೇ ಆಗಿದೆ”[2]

ಉದಾಹರಣೆಗೆ 'ಗಂಡು ಕೂತು ಕೆಟ್ಟ, ಹೆಣ್ಣು ತಿರುಗಿ ಕೆಟ್ಟಳು', ಎಂಬ ಗಾದೆ ಮಾತನ್ನು ಇವತ್ತಿನ ಕಾಲಕ್ಕೆ ಅನ್ವಯ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಪ್ರಸ್ತುತ ಇದನ್ನು ಯಾರೂ ಒಪ್ಪುವುದಕ್ಕೂ ಸಾಧ್ಯವಿಲ್ಲ. ವಿದ್ಯಾಭ್ಯಾಸ, ನೌಕರಿ, ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸಲು ಇಂದಿನ ಮಹಿಳೆ ಮನೆಯ ಹೊಸ್ತಿಲು ದಾಟುವುದು ಅನಿವಾರ್ಯವಾಗಿದೆ. 'ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ' ಇವು ಯಾವುವೂ ಇವತ್ತು ಒಪ್ಪುವಂತವುಗಳಲ್ಲ. ಕಾರಣ ಇಂದಿನ ಜಗತ್ತಿನಲ್ಲಿ ಅನೇಕ ಅತ್ಯುನ್ನತ ಹುದ್ದೆಗಳಲ್ಲಿ ಮಹಿಳೆಯರಿದ್ದಾರೆ ಮತ್ತು ಅವರೆಲ್ಲ ಅತ್ಯಂತ ಸಮರ್ಥವಾಗಿ ಆ ಹುದ್ದೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಹಾಗೆಯೇ ನಮ್ಮ ಹಿಂದಿನ ಜನಪದ ಕಥೆಗಳು ಸ್ತ್ರೀಯರ ಸುತ್ತ ಹೆಣೆದ

ಕಥೆಗಳೇ ಆಗಿರುತ್ತಿದ್ದವು. ಇಲ್ಲಿ ಅಜ್ಜಿ, ತಂಗಿ, ಅತ್ತೆ, ಸೊಸೆ, ಮಾಟಗಾತಿ, ದೇವತೆ, ರಾಕ್ಷಸಿ ಹೀಗೆ. ಇಲ್ಲಿ “ಕಾರ್ಯಸಾಧನೆಯ ಮಾರ್ಗ ತೋರುವವಳು ಸಾಮಾನ್ಯ ಹೆಣ್ಣು. ಹೀಗೆ ಈ ಕ್ರಿಯಾಚಾಲನ ವ್ಯಕ್ತಿಗಳಾರೂ ಗಂಡಾಗಿಲ್ಲದಿರುವುದು ಅಥವಾ ಅವರೆಲ್ಲರೂ ಹೆಣ್ಣಾಗಿರುವುದು ಹೆಣ್ಣುಶಕ್ತಿಯನ್ನು ಅನಾವರಣಗೊಳಿಸುತ್ತದೆ. ಗಂಡು ಇಲ್ಲಿ ಕಾರ್ಯ ಸಾಧನೆಯ ಮಾಧ್ಯಮವಾಗಿ ಮಾತ್ರ ನಿರ್ವಹಿಸಲ್ಪಡುತ್ತಾನೆ. ಬೌದ್ಧಿಕ ಶಕ್ತಿ ಗಂಡಿನದು, ದೈಹಿಕ ಶ್ರಮವಷ್ಟೇ ಹೆಣ್ಣಿನದು ಎಂಬ ದುಡಿಮೆಯ ಲಿಂಗನೀತಿ ಹೆಣ್ಣಿನ ಶಕ್ತಿಯನ್ನು ಅಲ್ಲಗಳೆದು ಆಕೆಯ ದುಡಿಮೆಯನ್ನು ಮೌಲ್ಯರಹಿತವಾಗಿ ಮಾಡಿದೆ. ಇದಕ್ಕೆ ಪ್ರತಿಯಾಗಿ ಜನಪದ ಕತೆಯೊಳಗಿನ ಹೆಣ್ಣುಗಳು ಬುದ್ಧಿವಂತರು, ಧೈರ್ಯವಂತರು, ಜಾಣೆಯರು, ಸಾಹಸಿಗಳು, ಸ್ವಾಭಿಮಾನಿಗಳು. ತನ್ನ ಬುದ್ಧಿವಂತಿಕೆಯಿಂದಲೇ ರಾಕ್ಷಸನನ್ನು, ಪ್ರತಿನಾಯಕನನ್ನು ಮಣ್ಣು ಮುಕ್ಕಿಸುವ, ತನಗೆ ಒಲ್ಲದವನನ್ನು ತಂತ್ರಹೂಡಿ ಮೋಸಗೊಳಿಸುವ ಮೂಲಕ ಗೆಲವು ಸಾಧಿಸುತ್ತಾಳೆ. ಈಕೆ ಮುಂದಾಗುವ ಘಟನೆಯನ್ನು ತಿಳಿಯಬಲ್ಲ ಅತೀಂದ್ರಿಯ ಶಕ್ತಿವಂತೆ. ಗಂಡಿಗೆ ಸಾಧ್ಯವಾಗದ ಒಗಟನ್ನು ಬಿಡಿಸುವ ಜಾಣೆ. ಬಹುತೇಕವಾಗಿ ಸಿಗುವ ಹಾಸ್ಯ ಕತೆಗಳ ನಾಯಕ ಪೆದ್ದಗುಂಡ, ದಡ್ಡ. ಅದು ಪೆದ್ದುಗುಂಡಿ ಅಥವಾ ದಡ್ಡಿಯಾಗಿರುವುದಿಲ್ಲ ಎನ್ನುವುದು ಗಮನಾರ್ಹ.”[3] ಆದರೆ ಪ್ರಸ್ತುತ ಸಮಾಜದಲ್ಲಿ ಪುರುಷ ಪ್ರಧಾನ ಕಥಾ ಚೌಕಟ್ಟುಗಳನ್ನು ಕಾಣುತ್ತೇವೆ. ಸ್ತ್ರೀಯರದ್ದು ಸಾಧನಾಪರವಾದ ಇಲ್ಲವೇ ಅಳುಮುಂಜಿ ಕಥೆಗಳು ಈ ನಡುವೆ ಸೃಷ್ಟಿಯಾಗಿವೆ. ಆದರೆ ಇಂದಿನ ಆಧುನಿಕ ಕವಯತ್ರಿಯರು, ಕಥಗಾರ್ತಿಯರ ಕತೆಗಳು ಸ್ತ್ರೀವಾದಿ ನೆಲೆಯಿಂದ ಸಾಹಿತ್ಯ ಸೃಷ್ಟಿ ಮಾಡಿರುವುದನ್ನು ಕಾಣುತ್ತೇವೆ.

**ಅತ್ತೀಯ ಮನಿಯಾಗ ಹತ್ತೆಂಟು ಬೈದರ**
**ಉತ್ತರ ಬ್ಯಾಡ ನನ ಮಗಳೆ/ ನೆರೆಯಿದ್ದು/**
**ಎಂಥ ಉತ್ತಮರ ಮಗಳೆಲ್ಲೆ**

ಎಂದು ಹಿಂದಿನ ಕಾಲದ ಜನಪದ ಗರತಿ ಗಂಡನ ಮನೆಗೆ ಹೋಗುತ್ತಿರುವ ತನ್ನ ಮಗಳಿಗೆ ಹೇಳಿಕಳುಹಿಸಿ ಕುಟುಂಬದ ಸ್ವಾಸ್ಥ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಬುದ್ಧಿವಾದವನ್ನು ಹೇಳಿಕಳುಹಿಸುತ್ತಿದ್ದಳು. ಆದರೆ ಪ್ರಸ್ತುತ ಸಮಾಜದಲ್ಲಿ ಇಂತಹ ಮಾತುಗಳ ಬಹುನಿರೀಕ್ಷೆಯನ್ನು ಮಾಡುವಂತಿಲ್ಲ. 'ಅಂಗೀಯ ಮ್ಯಾಲಂಗಿ ಚಂದೇನೋ ನನರಾಯ' ಎಂದು ಬೇರೊಂದು ಹೆಣ್ಣಿನ ಸಖ್ಯವನ್ನು ಮಾಡಿದ ಗಂಡನನ್ನು ಪ್ರೀತಿಯ ಮಾತಿನಲ್ಲಿಯೇ ಸರಿದಾರಿಗೆ ತರುವ ಜನಪದ ಗರತಿಯ ನಡೆ ಇಂದಿನ ಆಧುನಿಕ ದಾಂಪತ್ಯದಲ್ಲಿ ಸಣ್ಣ ವಿಷಯಕ್ಕೂ ವಿಚ್ಛೇದನಗಳನ್ನು ನೀಡುತ್ತಿರುವವರು ಅನುಸರಿಸಬೇಕಾದುದು.

"ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳಹೊರಗ ಆಡಿದರ
ಬೀಸಣಕೆ ಗಾಳಿ ಸುಳಿದಾವ"

ಎಂದು ಜನಪದ ಗರತಿ ಹಾಡಿದರೆ ಇಂದಿನ ಮಹಿಳೆ ಕುಟುಂಬದ ಆರ್ಥಿಕ ಪ್ರಗತಿ, ಮಕ್ಕಳ ಶ್ರೇಯೋಭಿವೃದ್ಧಿ, ತನ್ನ ಅಸ್ಮಿತೆ, ಸ್ವಾವಲಂಬಿ ಬದುಕಿಗೋಸ್ಕರ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದಿರುವ ಮಹಿಳೆ ಪುರುಷನಿಗೆ ಸರಿಸಮಾನವಾಗಿ ದುಡಿಯುತ್ತಿರುವುದರಿಂದ ಮಕ್ಕಳ ಆರೈಕೆಗೋಸ್ಕರ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದಾಳೆ.

ಹೀಗೆ ಒಂದು ಕಾಲ ಘಟ್ಟದಲ್ಲಿ ನೇಪಥ್ಯಕ್ಕೆ ಸರಿದಿದ್ದರೂ ಅದರಲ್ಲಿಯೂ ತನ್ನ ಅಸ್ಮಿತೆಯನ್ನು ತೋರಿಸಿದ್ದ ಗರತಿಯರೂ ಗಂಗೆಯ ಹರಿಯುವಿಕೆಯಂತೆ ಇಂದಿಗೂ ಜೀವಂತಿಕೆಯಿಂದ ಆಧುನಿಕ ಮಹಿಳೆಯೊಳಗಿದ್ದಾಳೆ. ಉನ್ನತ ಶಿಕ್ಷಣ, ಆರ್ಥಿಕ ಸ್ವಾವಲಂಬನೆಯಿಂದಾಗಿ ಇಂದಿನ ಮಹಿಳೆ ಸಶಕ್ತ, ಸಬಲಳಾಗಿ ಗುರುತಿಸಿಕೊಂಡಿದ್ದಾಳೆ. ಮತ್ತು ಸ್ತ್ರೀಯರ ಇಂದಿನ ಸಶಕ್ತ ಬದುಕಿಗೆ ಜನಪದ ಗರತಿಯರ ಪ್ರಭಾವ ದೊಡ್ಡಮಟ್ಟದಲ್ಲಿದೆ. "ಹೆಣ್ಣಿನ ಬಿಡುಗಡೆಗೆ ನಾವು ಪಶ್ಚಿಮದ ಕಡೆಗೆ ದೃಷ್ಟಿ ಹರಿಸುವುದಕ್ಕಿಂತ ನಮ್ಮದೇ ಸಾಂಸ್ಕೃತಿಕ ಸಂದರ್ಭದಲ್ಲಿ ಹೆಣ್ಣೊಬ್ಬಳು ತನ್ನ ಸುತ್ತಿನ ಲೋಕವನ್ನು ಗ್ರಹಿಸಿದ ಮತ್ತು ತನ್ನ ಅನನ್ಯತೆಯನ್ನು ಸ್ಥಾಪಿಸಿದ ಕಡೆಗೆ ನಾವೀಗ ನೋಡಬೇಕಾಗಿದೆ..ಹೀಗಾಗಿ ನಮ್ಮ ಸ್ತ್ರೀವಾದಿ ಧೋರಣೆಗಳನ್ನು, ಹೋರಾಟಗಳನ್ನು ನಾವು ಜನಪದ ಸಂಸ್ಕೃತಿಯಿಂದ ಕಟ್ಟಿಕೊಳ್ಳಬೇಕಾದ ಅಗತ್ಯ ಬಹಳಷ್ಟಿದೆ."[4]

**ಕೊನೆ ಟಿಪ್ಪಣಿಗಳು:**

1. ಶಾಂತಾ ಇಮ್ರಾಪುರ, (2001), ಧರ್ಮ– ಮಹಿಳೆ ಮತ್ತು ಸಮಾಜ, ಚೇತನಾ ಪ್ರಕಾಶನ, ಧಾರವಾಡ, ಪು.ಸಂ. 03
2. ಗಾಯತ್ರಿ ನಾವಡ, (1997), ವಿರಚನೆ, ಎನ್.ಆರ್.ಎ.ಎಮ್.ಎಚ್ ಪ್ರಕಾಶನ, ಕೋಟೇಶ್ವರ, ಪು.ಸಂ. 21
3. ಅದೇ, ಪು.ಸಂ. 134
4. ಅದೇ, ಪು.ಸಂ. 136

**ಪರಾಮರ್ಶನ ಗ್ರಂಥಗಳು:**

1. ಶಾಂತಾ ಇಮ್ರಾಪುರ, (2001), ಧರ್ಮ– ಮಹಿಳೆ ಮತ್ತು ಸಮಾಜ, ಚೇತನಾ ಪ್ರಕಾಶನ, ಧಾರವಾಡ.
2. ಗಾಯತ್ರಿ ನಾವಡ, (1997), ವಿರಚನೆ, ಎನ್.ಆರ್.ಎ.ಎಮ್.ಎಚ್ ಪ್ರಕಾಶನ, ಕೋಟೇಶ್ವರ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.